ಒಂದೇ ಸೂತ್ರದ ಹೆಣಿಕೆ | ಮಕ್ಕಳು, ಸಮುದಾಯ ಹಾಗು ಶಿಕ್ಷಕರು

ಜಗಮೋಹನ್ ಸಿಂಗ್ ಕಟೈಥ್

'ಹೊಟ್ಟೆ ಖಾಲಿಯಾದಾಗ ಮನಸ್ಸಿಟ್ಟು ಕಲಿಯಲು ಸಾಧ್ಯವೇ?' ಎಂಬ ಮಾತನ್ನು ನಾವು ಬಹುಬಾರಿ ಕೇಳುತ್ತೇವೆ. ಇಂತಹ ಮಾತುಗಳು ಏನನ್ನು ಹೇಳುತ್ತವೆ? ಔಪಚಾರಿಕ ಶಾಲಾ ಶಿಕ್ಷಣಕ್ಕೂ ಮಿಗಿಲಾಗಿ ಬದುಕುಳಿಯುವಿಕೆಯೇ ಮೊದಲು ಎಂಬುದನ್ನು ಇದು ಖಚಿತವಾಗಿ ಸೂಚಿಸುತ್ತದೆ. ಹಸಿವನ್ನು ನೀಗಿಸುವುದೇ ಬದುಕಿನ ಪ್ರಮುಖ ಕಾಳಜಿಯಾಗಿರುವ ಕುಟುಂಬಗಳಿಂದ ಬರುವ ಮಕ್ಕಳನ್ನು ಅಥವಾ ಹೊಟ್ಟೆ ತುಂಬಿಸಿಕೊಳ್ಳಲು ಜೀವನೋಪಾಯ ಮಾರ್ಗವನ್ನು ಹುಡುಕುವ ಕುಟುಂಬದ ಮಕ್ಕಳನ್ನು ಶೈಕ್ಷಣಿಕ ವಲಯಗಳಲ್ಲಿ 'ಮೊದಲ ಪೀಳಿಗೆಯ ಕಲಿಕಾರ್ಥಿಗಳು' ಎನ್ನುತ್ತಾರೆ. ಅವರನ್ನೇಕೆ ಮೊದಲ ಪೀಳಿಗೆಯ ಕಲಿಕಾರ್ಥಿಗಳೆಂದು ಕರೆಯತ್ತಾರೆಂದು ಯಾರಿಗೆ ಗೊತ್ತು? ಏಕೆಂದರೆ ಬಹುಶಃ ನಮ್ಮಲ್ಲಿ ಶಾಲೆಗಳನ್ನು ಮಾತ್ರ ಏಕೈಕ ಕಲಿಕಾ ಮಾರ್ಗವೆಂದು ಪರಿಗಣಿಸಿದ್ದು ಕಾರಣವಿರಬಹುದು. ತಮ್ಮ ಮಕ್ಕಳು ಈಗ ಓದಲು ಮತ್ತು ಬರೆಯಲು ಕಲಿತರೆ ಮುಂದಿನ 15–20 ವರ್ಷಗಳಲ್ಲಿ ಅವರು ಕಡಿಮೆ ಶ್ರಮದ ಉತ್ತಮ ಕೆಲಸ ಮಾಡಿ ತಮ್ಮ ಕಲಿಕೆಯ ಲಾಭವನ್ನು ಪಡೆಯಲು ಸಫಲರಾಗುತ್ತಾರೆಂಬುದನ್ನು ಪ್ರಾಯಶಃ ಅವರ ತಂದೆತಾಯಿಗಳು ಅರಿಯುವಲ್ಲಿ ಅಸಮರ್ಥರಾಗಿರಬಹುದು. ಇದು ಆಲೋಚನಾ ಸಾಮರ್ಥ್ಯದ ಕೊರತೆಯೋ ಅಥವಾ ಇದರಿಂದ ಈ ಆಯ್ಕೆಯನ್ನು ಪರಿಗಣಿಸಲು ತಡೆ ಒಡ್ಡುವ ಪರಿಣಾಮವಿರಬಹುದೇ, ಯಾರು ಬಲ್ಲರು? ಏನೇ ಆಗಲಿ, ಫಲಿತಾಂಶ ಮಾತ್ರ ಒಂದೇ ಬಗೆಯದ್ದು: ಇಂತಹವರಿಗೆ ಶಿಕ್ಷಣವು ಯಾವಾಗಲೂ ಎರಡನೆಯ ಆದ್ಯತೆಯಾಗಿರುತ್ತದೆ.

ಸಾಮಾನ್ಯವಾಗಿ, ಮಕ್ಕಳಿಗೆ ಮನೆ ಕೆಲಸ (Homework) ಎಂದರೆ ಅಕ್ಷರಗಳನ್ನು ಗುಂಡಾಗಿ ಬರೆಯುವುದು, ಪದ್ಯಗಳನ್ನು ಬಾಯಿಪಾಠ ಮಾಡುವುದು, ಪ್ರಶ್ನೆಗಳಿಗೆ ಉತ್ತರಿಸುವುದು ಇವೆಲ್ಲವನ್ನು ಒಳಗೊಂಡಿರುತ್ತವೆ. ಆದರೆ ಈ ಹಳ್ಳಿ ಮಕ್ಕಳ 'ಮನೆ ಕೆಲಸ' ಒಂದು ವಿಚಿತ್ರ ರೀತಿಯದ್ದಾಗಿರುತ್ತದೆ. ಅವರ ಪಾಲಿಗೆ ಮನೆ ಕೆಲಸ ಎಂದರೆ ಶಾಲೆಯಿಂದ ಮನೆಗೆ ಹಿಂದಿರುಗಿದ ಬಳಿಕ ಕಟ್ಟಿಗೆ ತರುವುದು, ಹುಲ್ಲು ಕತ್ತರಿಸುವುದು, ಜಾನುವಾರುಗಳ ಆರೈಕೆ, ತಮ್ಮ ಒಡಹುಟ್ಟಿದವರ ಪಾಲನೆ, ಪೋಷಣೆ, ತಂದೆತಾಯಿಗಳು ಮನೆಯಲ್ಲಿ ಇಲ್ಲದಾಗ ಮನೆ ನೋಡಿಕೊಳ್ಳುವುದು, ಧಾನ್ಯಗಳ ಕೊಯ್ಲು, ಕಟಾವು, ಧಾನ್ಯಗಳನ್ನು ವಿಂಗಡಿಸುವುದು ಇತ್ಯಾದಿ ಆಗಿರುತ್ತದೆ. ಹುಡುಗಿಯರಾದರೆ ಯಥಾಪ್ರಕಾರ ಅಡುಗೆ ತಯಾರಿಯ ಕೆಲಸ ನಿಶ್ಚಿತವಾಗಿರುತ್ತದೆ. ಇಲ್ಲಿನ ಮಕ್ಕಳಿಗೆ ಈ ಕೆಲಸಗಳು ತಮ್ಮ ಶಾಲೆಯಲ್ಲಿ ನೀಡಲಾದ ಮನೆಕೆಲಸಕ್ಕಿಂತ ಹೆಚ್ಚು ಸಹಜ ಹಾಗೂ ಅಗತ್ಯವೆನಿಸುತ್ತದೆ. ಶಾಲೆಯಲ್ಲಿ ನೀಡುವಂತಹ ಮನೆಕೆಲಸಗಳು ಅವರಿಗೆ ಬಹಳ ಕೃತಕವೆನಿಸುತ್ತದೆ ಮತ್ತು ತಮ್ಮ ವಾಸ್ತವ ಬದುಕಿನಿಂದ ಬಹಳ ದೂರವಾದದ್ದು ಎಂದು ಅನಿಸುತ್ತದೆ. ಅವನ್ನು ಪೂರ್ಣಗೊಳಿಸಲು ಅವರು ಸಾಕಷ್ಟು ಹೆಣಗಾಡಬೇಕಾಗುತ್ತದೆ. ತಮ್ಮ ಪರಿಚಿತ ಆಲೋಚನೆಗಳಿಂದ ಮತ್ತು ಸ್ವಾಭಿವ್ಯಕ್ತಿಗಳಿಂದ ದೂರವಾಗಿ ಹೊಸ ವಿಧಾನಗಳಿಗೆ, ವಿನ್ಯಾಸಗಳಿಗೆ ಅವರು ಒಗ್ಗಬೇಕಾಗುತ್ತದೆ. ಈ ಹೊಸ ವಿನ್ಯಾಸ ಅವರಿಗೆ ಬಹಳ ಸಂಕೀರ್ಣವೆನಿಸುತ್ತದೆ ಮತ್ತು ತಮ್ಮ ದೈನಂದಿನ ಬದುಕಿನೊಂದಿಗೆ ಅದನ್ನು ಸಂಪರ್ಕಿಸಲು ಅಸಾಧ್ಯವೆನಿಸುತ್ತದೆ. ಈ ಹಿನ್ನೆಲೆಯಿಂದ ಬರುವ ಬಹಳಷ್ಟು ಮಕ್ಕಳು ಕನಿಷ್ಠ ಪಕ್ಷ ಪ್ರಾಥಮಿಕ ಹಂತಗಳಲ್ಲಾದರೂ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಓದುತ್ತಾರೆ. ಆದ್ದರಿಂದಲೇ ಸರ್ಕಾರವು ಪ್ರತಿಯೊಬ್ಬರಿಗೂ ಶಿಕ್ಷಣವು ಸಿಗುವಂತೆ ಖಚಿತಪಡಿಸುವ ಹೊಣೆಗಾರಿಕೆಯನ್ನು ಹೊಂದಿದೆ.

ಜನಪ್ರಿಯ ಗ್ರಹಿಕೆಗಳು

ಓಹ್! ನಾನು ಪಾತ್ರಗಳು ಮತ್ತು ಹೊಣೆಗಾರಿಕೆಗಳ ಬಗ್ಗೆ ಹೇಳಿದೆ. ಈಗ ನಾವು ಇಲ್ಲಿಯ ಸಂಬಂಧಪಟ್ಟ ವಿಷಯಕ್ಕೆ ಬರೋಣ. ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಬಗ್ಗೆ, ಅಂದರೆ ಈ ಹಿಂದೆ ಉಲ್ಲೇಖಿಸಿದ ಹಿನ್ನೆಲೆಯಿಂದ ಬರುವ ಮಕ್ಕಳು ನಿರೀಕ್ಷಿತ ಕಲಿಕಾ ಮಟ್ಟಕ್ಕೆ ತಲುಪುವುದಿಲ್ಲ ಎಂದು ಅನೇಕ ಬಾರಿ ಹೇಳಲಾಗುತ್ತದೆ ಎನ್ನಲು ನಾನು ಪ್ರಯತ್ನಿಸುತ್ತಿದ್ದೆ. ಐದರಿಂದ ಏಳನೆಯ ತರಗತಿಗಳಲ್ಲಿ ಓದುವ ಈ ಮಕ್ಕಳು ಅಕ್ಷರಗಳನ್ನು ಗುರುತಿಸಲು ಕಷ್ಟಪಡುತ್ತಾರೆ. ಹಲವು ಸಂಘಟನೆಗಳು ಇಂತಹ ಸಂಶೋಧನಾ ಫಲಿತಾಂಶವನ್ನೇ ಮುಖ್ಯವಾಗಿ ತೋರಿಸುತ್ತವೆ. ಇದರ ಪರಿಹಾರಕ್ಕಾಗಿ ರಾಷ್ಟ್ರೀಯ ಸಮಾವೇಶಗಳನ್ನು ಆಯೋಜಿಸಲಾಗುತ್ತದೆ. ಈ ಕುರಿತಂತೆ ಸರ್ಕಾರವೂ ಕೂಡ ಸಂಶೋಧನೆಗಳನ್ನು ನಡೆಸುತ್ತದೆ. ಹಲವಾರು ಸಂಶೋಧನಾ ಲೇಖನಗಳು ಈ ವಿದ್ಯಾರ್ಥಿಗಳು ಕಲಿಕೆಯಲ್ಲಿ ತಮ್ಮ ತರಗತಿಯ ಮಟ್ಟಕ್ಕೆ ತಕ್ಕಂತೆ ಇಲ್ಲ ಎಂದು ಸಾಬೀತುಪಡಿಸಲೆಂದೇ ಮೀಸಲಾಗಿವೆ.

ಈ ಇಡೀ ಪ್ರಕ್ರಿಯೆಯು ಸಂಪೂರ್ಣವಾಗಿ ಶಿಕ್ಷಕರಿಬ್ಬರನ್ನೇ ಆರೋಪಿಸಲು ಪ್ರಯತ್ನಿಸುತ್ತದೆ. ಶಿಕ್ಷಕರು ತಮ್ಮ ಕೆಲಸವನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ; ಅವರು ಸಾಕಷ್ಟು ರಜೆ ತೆಗೆದುಕೊಳ್ಳುತ್ತಾರೆ ಎಂಬೆಲ್ಲಾ ದೋಷಾರೋಪಗಳನ್ನು ನಾವು ಕಾಣುತ್ತೇವೆ. ಆದರೆ ಶಿಕ್ಷಕರ ಗೈರುಹಾಜರಿಯ ಕುರಿತ ನಮ್ಮ ಸಂಶೋಧನೆಯು ಬೇರೆಯದನ್ನೇ ತೋರಿಸುತ್ತದೆ. ಶಿಕ್ಷಕರು ತಮ್ಮ ಮೇಲೆ ಹೊರೆಸುವ ವಿವಿಧ ಆಡಳಿತಾತ್ಮಕ ಕಾರ್ಯಗಳಿಂದಾಗಿ ಶಾಲೆಗಳಿಂದ ಹೊರಗಿರಬೇಕಾಗುತ್ತದೆ ಎಂಬುದನ್ನು ಅದು ಸೂಚಿಸಿದೆ. ಶಿಕ್ಷಕರಲ್ಲಿ ಮಕ್ಕಳ ಕಲಿಕೆಯ ಮಟ್ಟ ಕಡಿಮೆಯಿರಲು ಕಾರಣವನ್ನು ಕೇಳಿದಾಗ ಅವರು ಮಕ್ಕಳ ಹಿನ್ನೆಲೆ, ಬಡತನ ಮತ್ತು ಗೈರುಹಾಜರಿಯ ಮೇಲೆ ಆರೋಪಿಸುತ್ತಾರೆ. ಸ್ವಲ್ಪಮಟ್ಟಿಗೆ ಇದೂ ಕೂಡ ಕಾರಣವಿರಬಹುದೆಂಬುದರಲ್ಲಿ ತಥ್ಯವಿದೆ. ಅವರು ಸರ್ಕಾರದ ನೀತಿಗಳು ಮತ್ತು ಯೋಜನೆಗಳನ್ನೂ ಕೂಡ ದೂರುತ್ತಾರೆ. ಆದರೆ ನನ್ನ ದೀರ್ಘಕಾಲದ ಅನುಭವ ಹಾಗೂ ಅವಲೋಕನವು ಬೇರೆಯದೇ ಚಿತ್ರಣವನ್ನು ತೋರಿಸುತ್ತದೆ. ವಾಸ್ತವ ಸನ್ನಿವೇಶ ಏನೇ ಇದ್ದರೂ ಹಲವಾರು ಸರ್ಕಾರಿ ಶಿಕ್ಷಕರು ಉತ್ತಮವಾಗಿ, ಉತ್ಸಾಹದಿಂದ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದು ಕೇವಲ ನನ್ನ ನಂಬಿಕೆ ಮಾತ್ರವಲ್ಲ, ಹಲವು ಹಳ್ಳಿ ಜನರು ಮತ್ತು ಸಮುದಾಯಗಳ ನಂಬಿಕೆಯಾಗಿದೆ. ಇದರಿಂದಾಗಿಯೇ ಅವರು ಇಂತಹ ಶಿಕ್ಷಕರ ವರ್ಗಾವಣೆಯನ್ನು ನಿಲ್ಲಿಸಲು ಅಥವಾ ಅವರನ್ನು

ತಮ್ಮ ಶಾಲೆಯಿಂದ ಬೀಳ್ಕೊಡಲು ನಿರಾಕರಿಸುತ್ತಾರೆ. ಅವರನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಸಮಾನ ಪರಿಸ್ಥಿತಿಯಲ್ಲಿ ಕೆಲವು ಶಿಕ್ಷಕರು ಚೆನ್ನಾಗಿ ಕೆಲಸ ಮಾಡಬಲ್ಲರು ಮತ್ತು ಕೆಲವು ಶಿಕ್ಷಕರು ಅಸಮರ್ಥರಾಗಿರುತ್ತಾರೆಂಬುದು ಈ ಸಂದರ್ಭದಲ್ಲಿ ಗಮನಿಸ-ಬೇಕಾದ ಅಂಶವಾಗಿದೆ. ಉತ್ತಮ ಫಲಿತಾಂಶಕ್ಕಾಗಿ ಉತ್ತಮ ಸಾಧನೆ ಮಾಡುತ್ತಿರುವ ಶಿಕ್ಷಕರು ಏನು ಮಾಡುತ್ತಿದ್ದಾರೆ? ಈ ಶಿಕ್ಷಕರು ಅನುಸರಿಸುವ ಪ್ರಕ್ರಿಯೆಯನ್ನು ನಾವು ಅರ್ಥಮಾಡಿಕೊಂಡರೆ ನಮಗೆ ಉತ್ತಮ ಫಲಿತಾಂಶಗಳನ್ನು ಪಡೆಯುವ ಭರವಸೆಯ ಕಿರಣಗಳು ಗೋಚರವಾಗುತ್ತವೆ.

ಈ ಪರಿಣಾಮಕಾರಿ ಶಿಕ್ಷಕರತ್ತ ನೋಡಿದರೆ, ಖಂಡಿತವಾಗಿ ನನಗೆ ಅವರೆಲ್ಲರ ದೈನಂದಿನ ಅಭ್ಯಾಸಗಳಲ್ಲಿ ಸಾಮ್ಯತೆಯನ್ನು ಕಾಣಬಹುದಾಗಿದೆ. ಈಗ ನಾನು ನನ್ನದೇ ಬೋಧನಾ ಅಭ್ಯಾಸಗಳ ಬಗ್ಗೆ ಯೋಚಿಸಿದಾಗ ನಾನೂ ಕೂಡ ಈ ಶಿಕ್ಷಕರ ಪೈಕಿ ಒಬ್ಬನೆಂದು ಅನಿಸುತ್ತದೆ. ಅವರ ಹಲವಾರು ಪ್ರಕ್ರಿಯೆಗಳನ್ನು ನಾನೂ ನಿರ್ವಹಿಸಿದ್ದೇನೆ. ಆದ್ದರಿಂದ, ನಾನು ಈ ಪ್ರಕ್ರಿಯೆಗಳನ್ನು ಸ್ಪಷ್ಟಪಡಿಸಲು ಪ್ರಯತ್ನಿಸುವಾಗ ವೈಯಕ್ತಿಕ ಅನುಭವಗಳು, ಪೂರ್ವಾಗ್ರಹಗಳನ್ನು ಸಂಪೂರ್ಣವಾಗಿ ಬೇರ್ಪಡಿಸುವುದು ಬಹಳ ಕಷ್ಟ. ನಾನು ಈ ಶಿಕ್ಷಕರ ಸಾಮಾನ್ಯ ಅಥವಾ ವಿಶೇಷ ಕಾರ್ಯಚಟುವಟಿಕೆಗಳನ್ನು ಸೂಕ್ತವಾಗಿ ಪ್ರಸ್ತುತಪಡಿಸದಿರಬಹುದು. ಆದರೂ, ನನ್ನ ತಿಳುವಳಿಕೆಯ ಮಟ್ಟಿಗೆ ಆ ಅಭ್ಯಾಸಗಳನ್ನು ವಿವರಿಸಲು ಪ್ರಯತ್ನಪಟ್ಟಿರುವೆ.

ಇತರರ ಸಂತೋಷದಲ್ಲಿ ಭಾಗಿಯಾಗುವುದು

ಶಾಲೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಶಿಕ್ಷಕರು ಸಂತೋಷದ ಹಾಗೂ ಶುಭ ಸಮಾರಂಭಗಳಂತಹ ಸಂದರ್ಭಗಳಲ್ಲಿ ತಮ್ಮ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡುತ್ತಾರೆಂದು ನಾನು ಗಮನಿಸಿದ್ದೇನೆ. ಉದಾಹರಣೆಗೆ, ಮಗು ಹುಟ್ಟಿದ ಸಂದರ್ಭ, ಹುಟ್ಟುಹಬ್ಬ, ಮದುವೆ, ಅಥವಾ ಇತರೆ ಸಮಾರಂಭಗಳಲ್ಲಿ ಅವರು ಭೇಟಿ ನೀಡುತ್ತಾರೆ. ವಿದ್ಯಾರ್ಥಿಗಳ ಮನೆಯಲ್ಲಿ ಹಸು ಕರುವನ್ನು ಹಾಕಿದಾಗ ಕೂಡ ಅವರ ಮನೆಗಳಿಗೆ ಹೋಗುತ್ತಾರೆ. ಶಿಕ್ಷಕರಿಗೆ ಭೇಟಿ ನೀಡಲು ಸಾಧ್ಯವಾಗದಿದ್ದರೆ ಮಕ್ಕಳ ಕುಟುಂಬಗಳು ಹಲವು ಬಾರಿ ಗಿಣ್ಣನ್ನು (ಹಸು ಕರು ಹಾಕಿದಾಗ ಮೊದಲ ದಿನದ ಹಾಲಿನಲ್ಲಿ ತಯಾರಿಸುವ ತಿನಿಸು) ಕಳುಹಿಸುತ್ತಾರೆ. ಇಂತಹ ಸಂತೋಷ ಸನ್ನಿವೇಶಗಳಲ್ಲಿ ಭಾಗಿಯಾದಾಗ ಮಕ್ಕಳು ಮತ್ತು ಅವರ ತಂದೆತಾಯಿಗಳೊಂದಿಗೆ ಬಾಂಧವ್ಯವುಂಟಾಗುವುದು ಮಾತ್ರವಲ್ಲ, ಮಕ್ಕಳು ಮತ್ತು ಕುಟುಂಬ ಸದಸ್ಯರ ಜೊತೆಗೆ ಇರುವ ಸಂಬಂಧದ ಬಗ್ಗೆಯೂ ತಿಳಿಯುತ್ತದೆ. ಅಂದರೆ, ಪರಸ್ಪರ ಮಕ್ಕಳ ತಂದೆತಾಯಿಯರ ನಡುವೆ, ಅವರ ಅಜ್ಜಿಅಜ್ಜಂದಿರ ನಡುವೆ, ಚಿಕ್ಕಮ್ಮ, ಚಿಕ್ಕಪ್ಪ, ದೊಡ್ಡಪ್ಪ, ದೊಡ್ಡಮ್ಮಂದಿರ ನಡುವೆ, ತಂದೆತಾಯಿ ಮತ್ತು ಮಕ್ಕಳ ನಡುವಿನ ಸಂಬಂಧ, ಈ ಎಲ್ಲವೂ ಮಗುವಿನ ಭಾವನಾತ್ಮಕ, ಗ್ರಹಿಕಾತ್ಮಕ ಹಾಗೂ ಚಲನಾತ್ಮಕ ಸಾಮರ್ಥ್ಯಗಳ ಮೇಲೆ ಪ್ರಭಾವ ಬೀರುತ್ತದೆ. ಈ ಎಲ್ಲ ಸಂಬಂಧಗಳ ತಿಳುವಳಿಕೆಯು ಶಿಕ್ಷಕರ ಕಾರ್ಯತಂತ್ರದ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಇದು ಯಾವ ರೀತಿ ಅಥವಾ ಯಾವ ಮಟ್ಟದಲ್ಲಿ ಮಗುವಿಗೆ ನೆರವನ್ನು ನೀಡಬೇಕು, ಅವರು ಎಷ್ಟು ಸಂವೇದನಶೀಲರಾಗಬೇಕು, ಮಗುವಿಗೆ ಯಾವ ರೀತಿಯ ಪ್ರೇರಣೆ ಬೇಕು ಎಂಬ ಬಗ್ಗೆ ತಾವು ರೂಪಿಸುವ ಕಾರ್ಯತಂತ್ರದ ಮೇಲೆ ಪರಿಣಾಮ ಬೀರುತ್ತದೆ. ಮಗುವು ಏಕೆ ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದು ತಿಳಿಯಲು ಕಾರಣವನ್ನು ವಿಶ್ಲೇಷಿಸಲು ಮತ್ತು ಆ ಸಮಸ್ಯೆಗಳಿಗೆ ಪರಿಹಾರ ಕಂಡುಹುಡುಕಲು ನೆರವಾಗುತ್ತದೆ. ಅವರು ಯಾವುದಕ್ಕೂ ಹೆಚ್ಚು ಪ್ರಯತ್ನ ಮಾಡಬೇಕಿಲ್ಲ. ಅವರು ಕೇವಲ ಈ ಎಲ್ಲ ವಿಷಯಗಳ ಬಗ್ಗೆ ಗಮನಹರಿಸಿದರೆ ಸಹಜವಾಗಿಯೇ ಎಲ್ಲವೂ ತಿಳಿಯುತ್ತದೆ.

ಪೋಷಕರ ಸಂಭ್ರಮದಲ್ಲಿ ಭಾಗವಹಿಸುವ ಮೂಲಕ ಅವರನ್ನು ಗೌರವಿಸಿದಾಗ ಪೋಷಕರು ಶಿಕ್ಷಕರಿಗೆ ಪ್ರೀತಿಯ ಮಳೆಯನ್ನೇ ಸುರಿಸುತ್ತಾರೆ. ಅವರ ಪ್ರೀತಿಯು ಹಲವಾರು ರೀತಿಯಲ್ಲಿ ವ್ಯಕ್ತವಾಗುತ್ತದೆ. ಕಟಾವಿನ ಸಮಯದಲ್ಲಿ ಬೆಳೆಗಳನ್ನು ನೀಡುವ ರೂಪದಲ್ಲಾಗಲೀ, ಹಣ್ಣು ತರಕಾರಿಗಳನ್ನು ಕೊಡುವುದು, ಮರದಲ್ಲಿ ಬಿಟ್ಟ ಮೊದಲ ಹಣ್ಣನ್ನು ಅವರಿಗಾಗಿ ಮೀಸಲಿಡುವುದು, ಕೆಲವೊಮ್ಮೆ ಗಿಣ್ಣನ್ನು ನೀಡುವುದರ ಮೂಲಕವೂ ಈ ಪ್ರೀತಿಯು ಬಿಂಬಿತವಾಗುತ್ತದೆ. ಶಿಕ್ಷಕರಿಗೆ ಪೋಷಕರು ತೋರಿಸುವ ಪ್ರೀತಿ, ಗೌರವ ಮತ್ತು ಬೋಧನಾ ಅಭ್ಯಾಸಗಳ ನಡುವೆ ನಿಕಟ ಸಂಬಂಧವಿದೆ. ಇದನ್ನು ಅನುಭವಿಸಬೇಕು, ಕೇವಲ ವಿವರಣೆ ನೀಡುವುದಲ್ಲ. ಇಲ್ಲೇ ತರ್ಕವು ಗೌಣವಾಗುತ್ತದೆ.

ಸಂಕಷ್ಟದ ಕಾಲದಲ್ಲಿ ಅವರಿಗೆ ಬೆಂಬಲ

ಪೋಷಕರ ಸಂತೋಷದ ಕ್ಷಣಗಳಲ್ಲಿ ಮಾತ್ರ ಭಾಗಿಯಾಗದೆ, ಅವರ ನೋವಿನ, ದುಃಖದ, ಸಂಕಷ್ಟದ ಸಮಯದಲ್ಲೂ ಅವರೊಂದಿಗಿ-ರುವುದು ಉತ್ತಮ ಶಿಕ್ಷಕರ ಮತ್ತೊಂದು ಗುಣವಾಗಿದೆ. ಮನೆಯಲ್ಲಿ ಒಬ್ಬರಿಗೆ ಅನಾರೋಗ್ಯವಿದ್ದರೆ ಶಿಕ್ಷಕರು ಅವರ ಮನೆಗೆ ಹೋಗುತ್ತಾರೆ ಅಥವಾ ದೂರವಾಣಿ ಮೂಲಕ ವಿಚಾರಿಸುತ್ತಾರೆ. ಕುಟುಂಬದಲ್ಲಿ ಯಾರಾದರೂ ಸಾವಿಗೀಡಾದರೆ ಅಥವಾ ಏನಾದರೂ ನಷ್ಟವಾದರೆ– ಕುಟುಂಬ ಸದಸ್ಯ, ದನ, ಭೂಮಿ ಅಥವಾ ಫಸಲು ಏನೇ ಆಗಿರಬಹುದು – ಆ ಬಗ್ಗೆ ವಿಚಾರಿಸುತ್ತಾರೆ, ಸಾಂತ್ವನ ಹೇಳುತ್ತಾರೆ. ಇಷ್ಟೇ ಅಲ್ಲದೆ ಕುಟುಂಬದ ಮಧ್ಯೆ ಬರುವ ವೈಮನಸ್ಯ, ಜಗಳಗಳ ಬಗ್ಗೆ ಕೂಡ ಕಾಳಜಿ ವಹಿಸುತ್ತಾರೆ. **ಅದು ಒಬ್ಬರ ಜೊತೆ ಮಾತನಾಡುವ ಅಥವಾ ಆಲಿಸುವ, ಸಂಬಂಧಗಳನ್ನು ಬೆಸೆಯುವ ರೀತಿಯಲ್ಲಿ ಮನೋಭಾವವೇ ಸಂಪೂರ್ಣವಾಗಿ ಬದಲಾಗುವಂತಹ ಒಂದು ಸರಳ ಕೆಲಸವಾಗಿರಬಹುದು**. ತಮಾಷೆಯೆಂದರೆ, ಇದಕ್ಕೆ ಯಾವುದೇ ವಿಶೇಷ ಪ್ರಯತ್ನ ಬೇಕಿಲ್ಲ. ಸಂಬಂಧದ ಅರಿವಾದಾಗ ಅದನ್ನು ಭಾವಿಸಿದಾಗ ಪ್ರಯತ್ನ ಪೂರ್ವಕವಾಗಿ ಪ್ರಶ್ನೆಗಳನ್ನು ಕೇಳುವ ಅಗತ್ಯವಿರುವುದಿಲ್ಲ, ಎಲ್ಲವೂ ಸಹಜವಾಗಿ ನಡೆಯುತ್ತದೆ. ಈ ಶಿಕ್ಷಕರು ಲಾಕ್‌ಡೌನ್‌ಗಳ ಸಮಯದಲ್ಲಿಯೂ ಕೂಡ ಮಕ್ಕಳೊಂದಿಗೆ ಸಂಪರ್ಕದಲ್ಲಿರುತ್ತಾರೆ. ಅವರ ಮನೆಗಳಲ್ಲಿನ ಸಮಸ್ಯೆಗಳ ಬಗ್ಗೆ ಸಹಾನುಭೂತಿ ಸೂಚಿಸುತ್ತಾರೆ. ಯಾವಾಗಲೂ ಅವರಿಗೆ ಸಹಾಯ ಮಾಡಲು ಸಿದ್ಧರಿರುತ್ತಾರೆ. ಈ ಗುಣವು ನೇರವಾಗಿ ಕಲಿಕೆಯೊಂದಿಗೆ ಯಾವ ಸಂಬಂಧವೂ ಹೊಂದಿಲ್ಲದಿದ್ದರೂ ಇದು ಒಬ್ಬ ಶಿಕ್ಷಕರು ಉತ್ತಮವಾಗಿ ಹೆಚ್ಚು ಪರಿಣಾಮಶೀಲರಾಗಿ ಕಾರ್ಯನಿರ್ವಹಿಸಲು ಖಂಡಿತ ನೆರವಾಗುತ್ತದೆ.

ಹಳ್ಳಿಯ ಆಗುಹೋಗುಗಳಲ್ಲಿ ಭಾಗಿಯಾಗುವುದು

ಇಂತಹ ಶಿಕ್ಷಕರು ಪೋಷಕರೊಂದಿಗೆ ಮಾತ್ರವಲ್ಲ, ಇನ್ನು ವಿಶಾಲ ಸ್ತರದಲ್ಲಿ ಊರಿನವರ ಜೊತೆಗೂ ಈ ಬಗೆಯ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆಂಬುದನ್ನು ನಾನು ಬಹುಬಾರಿ ಗಮನಿಸಿದ್ದೇನೆ. ಪ್ರಾರ್ಥನಾ ಸಭೆಗಳು ಮತ್ತು ಧಾರ್ಮಿಕ ಹಬ್ಬಗಳಲ್ಲಿ ಅವರು ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗುತ್ತಾರೆ. ಊರಿನ ಹೆಂಗಸರು ಮಹಿಳಾ ಶಿಕ್ಷಕರ ಜೊತೆಗೆ ತಮ್ಮ ವೈವಾಹಿಕ ವಿಚಾರಗಳು ಮತ್ತು ಸಂಕಟಗಳನ್ನು ಹಂಚಿಕೊಳ್ಳುತ್ತಾರೆ. ತಮ್ಮ ಆರೋಗ್ಯ ಸಮಸ್ಯೆಗಳು ಮತ್ತು ಕಾಯಿಲೆಗಳ ಬಗ್ಗೆ ಕೂಡ ಹಂಚಿಕೊಳ್ಳುತ್ತಾರೆ. ಶಿಕ್ಷಕರೂ ಕೂಡ ಔಷಧಿಗಳನ್ನು ಒದಗಿಸುವ ಅಥವಾ ಸಲಹೆ ನೀಡುವ

ಮೂಲಕ ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ. ಈ ರೀತಿಯ ಅನ್ಯೋನ್ಯ ಆತ್ಮೀಯ ಸಂಬಂಧವು ಮಗುವಿನ ಕಲಿಕೆಯ ಮೇಲೆ ನೇರವಾಗಿ, ಪರಿಣಾಮ ಬೀರುವುದಿಲ್ಲವಾದರೂ ಶಾಲೆಯೊಂದಿಗೆ ಸಮುದಾಯದ ಸಂಬಂಧದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಹಳ್ಳಿಗಳ ಜನರು ಶಾಲೆಯನ್ನು ತಮ್ಮದೆಂದು ಪರಿಗಣಿಸುತ್ತಾರೆ ಮತ್ತು ಸಾಧ್ಯವಾಗುವ ಎಲ್ಲ ರೀತಿಯಲ್ಲಿ ಶಾಲೆಯನ್ನು ಉತ್ತಮಗೊಳಸಲು ಪ್ರಯತ್ನಿಸುತ್ತಾರೆ. ಅವರು ಶಾಲೆಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಅಗತ್ಯಬಿದ್ದಾಗ ಶಾಲೆಗಾಗಿ ಕೆಲಸ ಕೂಡ ಮಾಡುತ್ತಾರೆ. ಇಂತಹ ಅನ್ಯೋನ್ಯ ಆತ್ಮೀಯ ಸಂಬಂಧ ಸ್ಥಾಪಿತವಾಗಿರದ ಸ್ಥಳಗಳಲ್ಲಿ ನಾವು ಬಹುಬಾರಿ ಶಾಲೆಯಲ್ಲಿ ಕಳ್ಳತನ ನಡೆಯುವುದು ಅಥವಾ ಶಾಲೆಯ ಆಸ್ತಿಗೆ ಹಾನಿಯಾಗಿರುವುದನ್ನು ಕಾಣುತ್ತೇವೆ. ಶಾಲೆಯಲ್ಲಿ ದಾಂಧಲೆ ನಡೆಸಿರುವುದನ್ನು ಕಾಣುತ್ತೇವೆ. ಬಹುಬಾರಿ ಶಾಲೆ ಮತ್ತು ಸಮುದಾಯದ ನಡುವೆ ಪರಸ್ಪರ ಅಪನಂಬಿಕೆ ಮತ್ತು ಅನುಮಾನವನ್ನು ನಾವು ಕಾಣುತ್ತೇವೆ. ಈ ವಿಷಯಗಳು ಕೈ ಮೀರಿ ವೈಮನಸ್ಯ ತೀವ್ರವಾಗಿ ಪ್ರತಿಭಟನೆಗಳು ಹಾಗೂ ಔಪಚಾರಿಕ ದೂರುಗಳವರೆಗೂ ಹೋಗಬಹುದು.

ಶಾಲಾ ಚೌಕಟ್ಟಿಗೂ ಮೀರಿ ಮಕ್ಕಳೊಂದಿಗೆ ಸಂಬಂಧ

ಇಂತಹ ಶಿಕ್ಷಕರು ಕೇವಲ ಶಾಲಾ ಸಮಯದಲ್ಲಿ ಮಾತ್ರ ಮಕ್ಕಳ ಜೊತೆಗೆ ತಮ್ಮ ಸಂಬಂಧವನ್ನು ಸೀಮಿತಗೊಳಸುವುದು ಸಾಧ್ಯವಿಲ್ಲ ಎಂದು ನಾನು ಕಂಡುಕೊಂಡಿದ್ದೇನೆ. ಶಾಲೆ ಮುಚ್ಚಿದ ದಿನಗಳಲ್ಲೂ ಅವರು ಮಕ್ಕಳೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರುತ್ತಾರೆ. ಅವರು ಸಹಜವಾಗಿ ಮಕ್ಕಳ ದೈನಂದಿನ ಚಟುವಟಿಕೆಗಳ ಬಗ್ಗೆ ತಿಳಯಲು ಆಸಕ್ತರಾಗಿರುತ್ತಾರೆ. ಆಗಾಗ್ಗೆ ಅವರು ಶಾಲೆ ಮುಗಿದ ನಂತರ ಮಕ್ಕಳಗಾಗಿ ಕೋಷ್ಟಕಗಳನ್ನು ಮಾಡಲು ತಾವೇ ಖುದ್ದಾಗಿ ಬಣ್ಣಗಳು, ಪೆನ್ಸಿಲ್, ನೋಟ್‌ಬುಕ್ ಮತ್ತು ಪುಸ್ತಕಗಳನ್ನು ಒಟ್ಟುಗೂಡಿಸುತ್ತಾರೆ. ಪಾಠ ಮಾಡಲು ಪರಿಕರಗಳನ್ನು ಮತ್ತು ಚಟುವಟಿಕೆಗಳನ್ನು ತಯಾರಿಸುತ್ತಾರೆ. ಒಮ್ಮೆ ಒಬ್ಬ ಶಿಕ್ಷಕರು ನನಗೆ ಹೇಳದ್ದು 'ನಾನು ನಮ್ಮ ಮಕ್ಕಳ ಶಾಲೆಯಲ್ಲಿ ಎಸೆದು ಬಿಟ್ಟ ಸೀಮೆಸುಣ್ಣದ ತುಂಡುಗಳು, ಪೆನ್ಸಿಲ್ ತುಂಡುಗಳು ಮತ್ತು ನೋಟ್ ಬುಕ್ಕುಗಳನ್ನು ಜಾಗರೂಕತೆಯಿಂದ ಸಂಗ್ರಹಿಸಿ ಅವುಗಳನ್ನು ನನ್ನ ಶಾಲೆಯಲ್ಲಿ ಬಳಸುತ್ತೇನೆ. ಬೇಡವೆಂದು ಬಿಟ್ಟ ವಸ್ತುಗಳನ್ನು ನನ್ನ ಶಾಲೆಯಲ್ಲಿ ಸುಲಭವಾಗಿ ಬಳಸಬಹುದು. ಪೆನ್ಸಿಲನ್ನು ಸ್ವಲ್ಪ ಚೂಪುಮಾಡಿದರೆ ಅದು ಚೆನ್ನಾಗಿ ಕೆಲಸ ಮಾಡುತ್ತದೆ. ಸಣ್ಣ ಪೆನ್ಸಿಲ್ ಅಥವಾ ಸೀಮೆಸುಣ್ಣದ ತುಂಡಿನಿಂದ ಕೈಹಿಡಿತ ಸ್ಥಿರವಾಗಲು ಕೈ ಹಿಡಿಯಲು ಅಭ್ಯಾಸವಾಗುತ್ತದೆ.'

ಕಲಿಸಲು ಮತ್ತು ಕಲಿಯಲು ಸಿದ್ಧತೆ

ನಾನು ಈ ಶಿಕ್ಷಕರಲ್ಲಿ ಇನ್ನೊಂದು ಸಾಮಾನ್ಯ ಒತ್ತಡವನ್ನು ಕೂಡ ಗುರುತಿಸಿದ್ದೇನೆ: ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ನಿರಂತರವಾಗಿ ಮಕ್ಕಳ ಕಲಿಕೆಯ ಬಗ್ಗೆ ಕಾಳಜಿಯಿರುತ್ತದೆ. ಮಕ್ಕಳಗೆ ಏನನ್ನಾದರೂ ಕಲಿಯಲು ಸಾಧ್ಯವಾಗದಿದ್ದರೆ ಅವರು ಉತ್ತರಕ್ಕಾಗಿ ಹುಡುಕುತ್ತಾರೆ. ಈ ಕಾಳಜಿಯು ಅವರಿಗೆ ಇನ್ನೂ ಹೆಚ್ಚು ಕಲಿಯಲು ಪ್ರೇರಣೆ ನೀಡುತ್ತದೆ. ಇದರಿಂದ ಅವರಿಗೆ ಹಲವಾರು ವೇದಿಕೆಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಲು ಕಾರಣವಾಗುತ್ತದೆ. ಒಳ್ಳೆಯದು ಅಥವಾ ಕೆಟ್ಟ ಅಭ್ಯಾಸಗಳಂತೆ ಅವು ಒಟ್ಟಿಗೆ ಹೆಣೆದುಕೊಂಡಿರುತ್ತವೆ. ಒಂದು ಕೆಟ್ಟ ಅಭ್ಯಾಸವು ಇನ್ನೊಂದನ್ನು ಪ್ರಚೋದಿಸುತ್ತದೆ ಮತ್ತು ಒಳ್ಳೆಯ ಒಂದು ಅಭ್ಯಾಸವು ಇನ್ನೊಂದಕ್ಕೆ ಎಡೆಮಾಡಿಕೊಡುತ್ತದೆ. ಇದೇ ರೀತಿ ಈ ಶಿಕ್ಷಕರಲ್ಲೂ ನಡೆಯುತ್ತದೆ. ಅವರ ಸಿದ್ಧತೆ ಮತ್ತು ಸಮರ್ಪಣಾ ಮನೋಭಾವವು ಅವರಿಗೆ ಕಲಿಯಲು ಪ್ರೇರಣೆ ನೀಡುತ್ತದೆ.

ವಿಶಾಲ ಮನಸ್ಸಿನಿಂದ ಕಾಣುವುದು

ಪರಿಣಾಮಕಾರಿ ಶಿಕ್ಷಕರು ಈ ಎಲ್ಲ ಅಭ್ಯಾಸಗಳನ್ನು ಅಳವಡಿಸಿ–ಕೊಳ್ಳುತ್ತಾರೆ ಎಂದು ನಾನು ಹೇಳುತ್ತಿಲ್ಲ. ಆದರೆ ಬಹುಬಾರಿ ಈ ಎಲ್ಲಾ ಅಭ್ಯಾಸಗಳನ್ನು ಪ್ರಯತ್ನಿಸುವುದನ್ನು ನಾವು ಹೆಚ್ಚಾಗಿ ಕಾಣುತ್ತೇವೆ. ಆದರೆ, ಪ್ರಗತಿಪರ ಹಾಗೂ ಸೃಜನಶೀಲ ತರಗತಿ ಅಭ್ಯಾಸಗಳು ಮಾತ್ರ ನಾವು ಮಾತನಾಡುತ್ತಿರುವ ಹಿನ್ನೆಲೆಯಿಂದ ಬರುವ ಮಕ್ಕಳ ಉತ್ತಮ ಫಲಿತಾಂಶಕ್ಕೆ ಎಡೆಮಾಡಿಕೊಡುವುದು ಎಂಬುದರ ಬಗ್ಗೆ ನನಗೆ ಅನುಮಾನವಿದೆ ಅಥವಾ ನಾನು ಇಂಥ ಬದಲಾವಣೆಯನ್ನು ನೋಡಿಲ್ಲ ಎಂದು ಹೇಳಬಹುದೇನೋ. ಆದರೆ ಕಲಿಕಾ ಪ್ರಕ್ರಿಯೆಯಲ್ಲಿ ಮಾತ್ರ ನಿರತರಾಗಿರದೆ ಮೇಲೆ ಹೇಳದ ಪಾತ್ರಗಳನ್ನು ವಹಿಸಿರುವ ಅಥವಾ ಕಾರ್ಯನಿರ್ವಹಿಸಿರುವವರು ಉತ್ತಮ ಫಲಿತಾಂಶಕ್ಕೆ ಕಾರಣರಾಗುವುದಂತೂ ನಿಜ. ಶಿಕ್ಷಣವನ್ನು ಸಾಕ್ಷರತೆ ಹಾಗೂ ಪುಸ್ತಕೀಯ ಜ್ಞಾನವನ್ನು ನೀಡುವ ಪಾತ್ರ ಎನ್ನುವುದನ್ನು ಮೀರಿ ಒಬ್ಬ ವ್ಯಕ್ತಿಯನ್ನು ಅತ್ಯುತ್ತಮವಾಗಿ ರೂಪಿಸುವ ಪಾತ್ರವಾಗಿ ನೋಡುವುದು ಅನಿವಾರ್ಯ. ಈ ರೀತಿಯ ತಿಳುವಳಿಕೆಯು ಜನರೊಂದಿಗೆ ವ್ಯವಹರಿಸುವ ಮೂಲಕ ಮಾತ್ರ ಬೆಳೆಯುತ್ತದೆ. ಪೋಷಕರೊಂದಿಗೆ ವ್ಯವಹರಿಸುವುದು ಮತ್ತು ಅವರೊಂದಿಗೆ ಒಳ್ಳೆಯ ಬಾಂಧವ್ಯ ಬೆಳೆಸಿಕೊಂಡರೆ ಇದು ಮಕ್ಕಳ ಜೊತೆಗೆ ಹೇಗೆ ಕೆಲಸಮಾಡುವುದು ಮತ್ತು ಅವರೊಂದಿಗೆ ಯಾವ ರೀತಿಯ ಕೆಲಸ ಮಾಡುವುದೆಂಬ ಚಿಂತನೆಯ ಬೀಜಗಳು ಮೊಳಕೆಯೊಡೆಯುತ್ತವೆ, ತಿಳುವಳಿಕೆ ಮೂಡುತ್ತದೆ.

ಎರಡನೆಯದಾಗಿ, ಶಾಲೆಯು ತನ್ನದೇ ಗುರುತಿರುವ ಅನನ್ಯ ಅಸ್ತಿತ್ವ ಹೊಂದಿದ್ದರೂ, ಅದು ಸಮಾಜದ ಒಂದು ಭಾಗವೇ ಹೊರತು ಪ್ರತ್ಯೇಕವಲ್ಲ ಎನ್ನುವುದನ್ನು ಕಡ್ಡಾಯವಾಗಿ ಅರ್ಥ–ಮಾಡಿಕೊಳ್ಳಬೇಕು. ನಾವು ಎಲ್ಲರೊಂದಿಗೆ ಸಂಪರ್ಕದಲ್ಲಿದ್ದು ಪರಸ್ಪರ ಅರ್ಥ ಮಾಡಿಕೊಂಡಾಗ ಮಾತ್ರ ಉತ್ತಮ ಶಿಕ್ಷಣವು ಸಾಧ್ಯವಾಗುತ್ತದೆ. ಶಾಲೆಗಳನ್ನು ಪ್ರತ್ಯೇಕವಾಗಿ ಅರ್ಥಮಾಡಿ–ಕೊಳ್ಳಬಾರದು. ಈ ರೀತಿಯಾಗಿ ಅರ್ಥ ಮಾಡಿಕೊಳ್ಳುವುದೆಂದರೆ ಆನೆಗೆ ಸಮಾಧಿ ತೋಡಲು ಒಂದು ಟೀ ಚಮಚದಿಂದ ಅಗೆದಂತಾಗುತ್ತದೆ. ವಿಶಾಲಾರ್ಥದಲ್ಲಿ ಒಂದು ಮಗು ಸಮಾಜ ಹಾಗೂ ಕುಟುಂಬದ ಒಂದು ಭಾಗ. ಒಬ್ಬ ಮಗುವನ್ನು ಅರ್ಥಮಾಡಿಕೊಳ್ಳಲು ಮಕ್ಕಳು, ಕುಟುಂಬ ಹಾಗೂ ಸಮಾಜದ ನಡುವಿನ ಸಂಬಂಧವನ್ನು ಸೂಕ್ತವಾಗಿ ಅರ್ಥ ಮಾಡಿಕೊಳ್ಳಬೇಕು. ಈ ಸಂಬಂಧವನ್ನು ನಾವು ಅಲಕ್ಷಿಸಿದರೆ ನಾವು ವಾಸ್ತವವನ್ನು ತಿಳಯಲಾರೆವು. ಒಂದು ವೇಳೆ ನಮಗೆ ವಾಸ್ತವವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಶಿಕ್ಷಕರು ಹಾಗೂ ಮಕ್ಕಳ ನಡುವಿನ ಸಂಬಂಧವು ಪರಿಣಾಮಕಾರಿ ಕಲಿಕೆಗೆ ಎಡೆಮಾಡಿ–ಕೊಡುವುದಿಲ್ಲ. ಯಾರಾದರೂ ಕೇವಲ 9ರಿಂದ 3 ಗಂಟೆವರೆಗೆ ಕೆಲಸ ಬೇಕು ಎಂದು ಭಾವಿಸಿ ಶಿಕ್ಷಕ ಹುದ್ದೆಗೆ ಸೇರಿದರೆ ಪರವಾಗಿಲ್ಲ. ಆದರೆ ಪರಿಣಾಮಕಾರಿ ಬೋಧನೆಗೆ ಈ ಪ್ರಕ್ರಿಯೆಯನ್ನು ಇಡಿಯಾಗಿ ಅರ್ಥಮಾಡಿಕೊಳ್ಳಬೇಕು. ನಾವು ಸೌಹಾರ್ದ ಸಂಬಂಧವನ್ನು ಬೆಳೆಸಿಕೊಳ್ಳಬೇಕಾದರೆ ಅರ್ಥ ಮಾಡಿಕೊಳ್ಳಬೇಕಾದರೆ ಪ್ರಯಾಸ ಪೂರ್ವಕ ಪ್ರಯತ್ನಗಳೇನೂ ಬೇಕಿಲ್ಲ. ಇದು ತಂತಾನೇ ನಮಗೆ ಬರುತ್ತದೆ. ಇದು ಒಬ್ಬ ಶಿಕ್ಷಕರ ಸಂವೇದನಶೀಲತ್ವ ಹಾಗೂ ಪರಿಣಾಮಕಾರಿತ್ವವನ್ನು ಉನ್ನತೀಕರಿಸುವುದು ಮಾತ್ರವಲ್ಲ ಬೋಧನಾ ಕೌಶಲ್ಯವನ್ನು ಸುಧಾರಿಸುವಲ್ಲಿ ಹೊಸ ಮಾರ್ಗಗಳನ್ನು ತೆರೆಯುತ್ತದೆ.


ಓರ್ವ ಶಿಕ್ಷಕರ ಮಾತು

ಅಂದು ಪ್ರಿಯಾಂಕಾ ಶಾಲೆಗೆ ಪ್ರವೇಶ ಪಡೆಯಲು ಬಂದ ದಿನದಂದು ಆಕೆ ನನ್ನ ಸೀರೆಯ ಸೆರಗಿನ ಹಿಂದೆ ಅಡಗಿ–ಕೊಂಡಳು. ಅವಳು ತನ್ನ ಅಜ್ಜಿಯ ಜೊತೆಗೆ ಬಂದಿದ್ದಳು. ನಾವು ಅವಳ ಜೊತೆ ಮಾತನಾಡುತ್ತಿದ್ದಂತೆ, ಅವಳ ಓದುವ ಸಾಮರ್ಥ್ಯ ತರಗತಿಯ ಮಕ್ಕಳ ಸರಾಸರಿಗಿಂತ ಕಡಿಮೆಯಾಗಿದೆ ಎನ್ನುವುದನ್ನು ಕಂಡುಕೊಂಡೆ: ತರಗತಿಯಲ್ಲಿ ಸ್ವಲ್ಪ ರೇಗಿದರೂ ಸುಮ್ಮನಾಗಿಬಿಡುತ್ತಿದ್ದಳು. ಶಾಲೆಯಲ್ಲಿ ಅವಳ ಹಾಜರಾತಿಯೂ ಕಡಿಮೆಯಾಗಿತ್ತು. ನಾನು ಇದರ ಬಗ್ಗೆ ಮಾತನಾಡಲು ಪ್ರಯತ್ನಪಟ್ಟೆ. ಆದರೆ ಅವಳು ಏನೂ ಹೇಳಲಿಲ್ಲ. ಆಗ ನಾನು ಅವಳ ಮನೆಗೆ ಹೋಗಿ ಬರಬೇಕೆಂದು ಯೋಚಿಸಿದೆ. ಪ್ರಾಯಶಃ ಅದರಿಂದ ನೆರವಾಗಬಹುದೆಂದು ಭಾವಿಸಿದೆ. ಅವಳ ಮನೆಗೆ ಹೋಗಿ ಅಜ್ಜಿಯೊಂದಿಗೆ ಮಾತನಾಡಿದೆ. ಅವರ ಜೊತೆ ಮಾತನಾಡುತ್ತಿದ್ದಂತೆ ನನಗೆ ನೆಲ ಕುಸಿದಂತಾಯಿತು. ಪ್ರಿಯಾಂಕಾಳ ಚಿಕ್ಕಮ್ಮ ತನ್ನ ಗಂಡನನ್ನು ಕಳೆದುಕೊಂಡಿದ್ದಳು. ಆಗ ಅವಳ ಒಂಟಿತನವನ್ನು ಹೋಗಲಾಡಿಸಲು ಅವಳ ಪೋಷಕರು ಚಿಕ್ಕಮ್ಮನಿಗೆ ಅವಳನ್ನು ಕೊಟ್ಟಿದ್ದರು. ಸ್ವಲ್ಪ ದಿನಗಳ ಬಳಿಕ ಚಿಕ್ಕಮ್ಮ ಚಂಡೀಗಢದಲ್ಲಿ ಕೆಲಸಕ್ಕೆ ಸೇರಿದಳು. ಅವಳು ಪ್ರಿಯಾಂಕಾಳನ್ನು ಅಜ್ಜಿಯ ಬಳಿ ಬಿಟ್ಟು ಹೋದಳು. ಇದನ್ನು ಕೇಳಿ ನನಗೆ ಬಹಳ ದುಃಖವಾಯಿತು. ಮರುದಿನ ಶಾಲೆಗೆ ಬಂದ ಮೇಲೆ ಏನೋ ಕಾರಣಕ್ಕೆ ನಾನು ಅವಳನ್ನು ಬೈಯ್ಯಲು ಹೋದೆ. ಆದರೆ ಅವಳ ಪರಿಸ್ಥಿತಿ ಬಗ್ಗೆ ನೆನಪಾಗಿ ನನಗೆ ಅಳು ತಡೆಯಲಾಗಲಿಲ್ಲ. ಶಿಕ್ಷಕರ ಕೊಠಡಿಗೆ ಹೋಗಿ ಸುಧಾರಿಸಿಕೊಂಡು ಬಂದೆ. ನಂತರ ಬಂದು ಅವಳನ್ನು ಬಿಗಿದಪ್ಪಿ ಮಾತನಾಡಿದೆ. ಅವಳು ಹೋಂ ವರ್ಕ್ ಮಾಡದಿದ್ದಾಗ ಕಾರಣವನ್ನು ಕೇಳುತ್ತಿದ್ದೆ. ಇದಾದ ನಂತರ ಅವಳು ಶಾಲೆಗೆ ಹೆಚ್ಚು ನಿಯಮಿತವಾಗಿ ಬರಲಾರಂಭಿಸಿದಳು. ಓದಿನಲ್ಲೂ ಸುಧಾರಣೆ ಕಂಡು ಬಂದಿತು. ಮುಂದೆ ಅವಳ ಅಜ್ಜಿ ನನ್ನ ಜೊತೆ ಎಲ್ಲ ವಿಷಯವನ್ನು ಮಾತನಾಡತೊಡಗಿದರು. ಈಗ ಅವರಿಗಾಗಿ ಮಾರುಕಟ್ಟೆಯಿಂದ ಸಾಮಾನು ತರಲು ಕೇಳುತ್ತಾರೆ. ಆಗಾಗ ನನಗೆ ತರಕಾರಿ ಹಾಗೂ ಧಾನ್ಯಗಳನ್ನು ಕಳುಹಿಸುತ್ತಾರೆ.

ಇನ್ನೊಬ್ಬ ಶಿಕ್ಷಕರ ಅನುಭವ

ರಾಧಿಕಾ ಯಾವಾಗಲೂ ಶಾಲೆಗೆ ತಡವಾಗಿ ಬರುತ್ತಿದ್ದಳು. ಅವಳ ಜೊತೆ ಈ ಸಮಸ್ಯೆ ಬಗ್ಗೆ ಮಾತನಾಡಿದರೂ ಅವಳ ಆಲಸ್ಯ ಮುಂದುವರೆದಿತ್ತು. ಬೆಳಗ್ಗೆ ಶಾಲೆಯ ಪ್ರಾರ್ಥನಾ ಸಭೆಯಲ್ಲಿ ಎಲ್ಲರೂ ಕೂಡ ಸಮಯಕ್ಕೆ ಸರಿಯಾಗಿ ಶಾಲೆಗೆ ಬರಬೇಕು ಎಂದು ಕೂಡ ನಾವು ಹೇಳಿದ್ದೆವು. ಬೇರೆ ಮಕ್ಕಳ ಜೊತೆಗೆ ಅವಳ ಬಗ್ಗೆ ಮಾತನಾಡಿದಾಗ ಅವಳ ತಂದೆ ದಿನಾಲೂ ತಡವಾಗಿ ಏಳುತ್ತಾರೆ ಎಂದು ಅವರು ಹೇಳಿದರು. ಅವಳ ಮನೆಗೆ ಹೋಗಿ ಮಾತನಾಡುವುದು ಲೇಸು ಎಂದು ಭಾವಿಸಿದೆ. ಅವಳ ಮನೆಗೆ ಹೋದಾಗ ಅವಳ ತಾಯಿ ಬೆಂಕಿಹಾಕಿಕೊಂಡು ಸಾವಿಗೀಡಾಗಿರುವ ವಿಚಾರ ತಿಳಿಯಿತು. ಅವಳ ತಂದೆ ಮದ್ಯವ್ಯಸನಿಯಾಗಿದ್ದು, ತಡರಾತ್ರಿಯವರೆಗೆ ಮದ್ಯಸೇವಿಸಿ ತಡವಾಗಿ ಏಳುತ್ತಾರೆಂದು ಗೊತ್ತಾಯಿತು. ಆದ್ದರಿಂದಲೇ ರಾಧಿಕಾ ಶಾಲೆಗೆ ತಡವಾಗಿ ಬರುವುದೆಂದು ತಿಳಿಯಿತು. ನಾನು ತಂದೆಯವರ ಜೊತೆಗೆ ಈ ಬಗ್ಗೆ ಮಾತನಾಡಿದೆ. ಅವರು ಅವಳನ್ನು ಅವಳ ಚಿಕ್ಕಮ್ಮನ ಮನೆಗೆ ಕಳುಹಿಸಿದರು. ನಾನು ರಾಧಿಕಾಳ ಬಗ್ಗೆ ಯೋಚಿಸಿದಾಗ ನನಗೆ ನೋವುಂಟಾಗುತ್ತಿತ್ತು. ಅಂದಿನಿಂದ ನಾನು ಅವಳ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಿದೆ. ಅವಳಿಗೆ ಹೆಚ್ಚು ಪ್ರೀತಿ, ಕರುಣೆ ತೋರಿಸಿದೆ. ಆಗಾಗ್ಗೆ ಅವಳ ಮನೆಗೆ ಹೋಗುತ್ತಿದ್ದೆ. ಒಂದು ದಿನ ಅವಳ ಮನೆಗೆ ಹೋದಾಗ ಅಲ್ಲಿದ್ದ ಮಕ್ಕಳೆಲ್ಲಾ ಅವಸರದಿಂದ ತಾವು ಇಟ್ಟುಕೊಂಡಿದ್ದ ವಸ್ತುವನ್ನು ಅಡಗಿಸಿಟ್ಟುಕೊಂಡರು. ಎಲ್ಲೆಡೆ ಕಾಗದಗಳು ಮತ್ತು ಹಿಟ್ಟು ಹರಡಿತ್ತು. ಇದರ ಬಗ್ಗೆ ಬಹಳ ಕೆದಕುವುದು ಬೇಡ, ಬೇರೆ ಸಮಯದಲ್ಲಿ ಕೇಳೋಣ ಎಂದು ಭಾವಿಸಿ ಹೊರಬಂದೆ.

ಇನ್ನೊಮ್ಮೆ ಎಲ್ಲ ಶಿಕ್ಷಕರು ಒಟ್ಟಿಗೆ ಕುಳಿತು ಪರೀಕ್ಷೆಯ ನಂತರ ನೋಟ್‌ಬುಕ್ಕನ್ನು ಪರಿಶೀಲಿಸುತ್ತಿದ್ದರು. ಆಗ ನಾನು ತರಗತಿಗೆ ಹೋದಾಗ ರಾಧಿಕಾ ತನ್ನ ಚಿಕ್ಕಮ್ಮನ ಮಕ್ಕಳ ಜೊತೆಗೂಡಿ ಸದ್ದಿಲ್ಲದೆ ಪೇಪರ್ ಬ್ಯಾಗುಗಳನ್ನು ಮಾಡುತ್ತಿದ್ದಳು. ಅವರು ನನ್ನನ್ನು ನೋಡಿದ ತಕ್ಷಣ ಅವುಗಳನ್ನು ಬಚ್ಚಿಟ್ಟರು. ನಾನು ಶಾಂತವಾಗಿ ಅವರನ್ನು ವಿಚಾರಿಸಿದೆ. ಆಗ ಅವರು ಕಾಗದದ ಚೀಲಗಳನ್ನು ತಯಾರಿಸುವುದಾಗಿ ನಂತರ ಅವುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಾಗಿ ನನಗೆ ಹೇಳಿದರು. ನಾನು ಮಕ್ಕಳಿಗಾಗಿ ಒಂದು ಕ್ರಾಫ್ಟ್ ತರಗತಿಯನ್ನು ಆರಂಭಿಸಿದೆ. ಅಲ್ಲಿ ಎಲ್ಲರಿಗೂ ಪೇಪರ್ ಬ್ಯಾಗ್ ತಯಾರಿಯ ಬಗ್ಗೆ ಕಲಿಸಿದೆ. ರಾಧಿಕಾ ಮತ್ತು ಅವಳ ಚಿಕ್ಕಮ್ಮನ ಮಕ್ಕಳು ಇದರಲ್ಲಿ ಬಹಳ ನುರಿತರಾಗಿದ್ದರು. ಅವರು ಇತರ ಬೇರೆ ಮಕ್ಕಳಿಗೆ ಇದನ್ನು ಕಲಿಸಲಾರಂಭಿಸಿದರು. ಮರುದಿನ ನಾನು ಮನೆಯಿಂದ ಹಳೆಯ ನ್ಯೂಸ್‌ಪೇಪರುಗಳನ್ನು ತಂದು ಅವರಿಗೆ ಕೊಟ್ಟೆ. ಮಕ್ಕಳು ತಾವು ತಯಾರಿಸಿದ ಎಲ್ಲ ಬ್ಯಾಗುಗಳನ್ನು ರಾಧಿಕಾಳಿಗೆ ನೀಡಿದರು. ಒಂದೊಮ್ಮೆ ತನ್ನ ಕಾರ್ಯದ ಬಗ್ಗೆ ಹೇಳಿಕೊಳ್ಳಲು ಹಿಂಜರಿಯುತ್ತಿದ್ದ ರಾಧಿಕಾ, ಈಗ ಅದನ್ನು ಇತರರಿಗೆ ಹೆಮ್ಮೆಯಿಂದ ಕಲಿಸುತ್ತಿದ್ದಳು. ಮುಂದೆ ಅವಳು ಓದಿನಲ್ಲೂ ಸುಧಾರಿಸಿದಳು. ಹಾಗೆಯೇ ಅವಳ ಶಾಲೆಯ ಹಾಜರಾತಿಯೂ ಸುಧಾರಿಸಿತು. ಒಂದು ದಿನ ಅವಳು ನಾನು ಅವಳ ತಾಯಿಯಾಗಬೇಕೆಂದು ಆಶಿಸುತ್ತಾಳೆಂದು ನನಗೆ ಕಾಗದ ಬರೆದಳು. ಅವಳು ನನ್ನಲ್ಲಿ ತನ್ನ ತಾಯಿಯನ್ನು ಕಾಣುತ್ತಾಳೆ.



ಜಗಮೋಹನ್ ಸಿಂಗ್ ಕಟ್ಯೈಥ್ ಅವರು ಕಳೆದ 28 ವರ್ಷಗಳಿಂದ ಸಾಮಾಜಿಕ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕಳೆದ 11 ವರ್ಷಗಳಿಂದ ಇದ್ದಾರೆ. ಘರ್‌ವಾಲ್ ಪ್ರದೇಶದ ಫೌಂಡೇಷನ್‌ನ ಕಾರ್ಯಚಟುವಟಿಕೆಯ ಮುಂದಾಳತ್ವವನ್ನು ವಹಿಸಿದ್ದಾರೆ. ಈಗ ಅವರು ಉತ್ತರಾಖಂಡದ ಶ್ರೀನಗರದಲ್ಲಿದ್ದಾರೆ. ಸೃಜನಶೀಲತೆ ಮತ್ತು ಪರ್ಯಾಯ ಮಾರ್ಗಗಳನ್ನು ಅನ್ವೇಷಿಸುತ್ತಾ ಹಲವಾರು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿಯ ವಿಷಯಗಳ ಕುರಿತು 18 ವರ್ಷಗಳಿಂದ ಅವರು ಸೊಸೈಟಿ ಫಾರ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಆಫ್ ಹಿಮಾಲಯಾಸ್ (ಎಸ್‌ಐಡಿಎಚ್) ಜೊತೆ ಕೆಲಸ ಮಾಡಿದ್ದಾರೆ. ಇವರನ್ನು jagmohan@azimpremjifoundaton.org ನಲ್ಲಿ ಸಂಪರ್ಕಿಸಬಹುದು.

ಅನುವಾದ: **ಹೇಮಾದೇವಿ ಬಿ ಎಸ್** । ಪರಿಶೀಲನೆ: **ಲತಾ ಕೆ.ಸಿ**